MYSORE LEGISLATIVE ASSEMBLY

THIRTY-FIRST DAY.

Friday, 20th July 1962.

The House met in the Assembly Hall, Vidhana Soudha, Bangalore, at One of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given)

Insufficient accommodation in the Government High School at Jalamangala.

*Q.—39. Sri T. MADAIAH GOWDA (Ramanagaram).—

Will the Government be pleased to state :—

(*a*) whether it has come to their notice that the High School at Jalamangala has not been provided with sufficient and proper accommodation and equipment;

(*b*) since how long the said High School has not been provided with necessary equipment and accommodation ?

*A.— Sri S. R. KANTHI (Minister for Education).—

(*a*) Yes.

(*b*) Since starting the School in 1956-57 in the local Primary School building, as the local High School Committee have not yet raised the necessary building fund towards construction of a new building for the High School and, therefore, there is no building accommodation for sufficient equipment.

ಶ್ರೀ ಟಿ. ಮಾದಯ್ಯ ಗೌಡ.—ಆರು ವರ್ಷಗಳ ಹಿಂದೆ ಮಂಜೂರಾಗಿರುವ ಹೈಸ್ಕೂಲಿಗೆ ಇದುವರೆಗೂ ಕಟ್ಟಡ ಇಲ್ಲವೆಂದು ಹೇಳಿದ್ದೀರಿ. ಗ್ರಾಮಸ್ಥರು ತಮಗೆ ಬಡತನವಿದ್ದರೂ ಬಹಳ ಕಷ್ಟದಿಂದ ಕಟ್ಟಡ ಕ್ಕಾಗಿ ಸುಮಾರು 20 ಸಾವಿರ ರೂಪಾಯಿ ಕೊಟ್ಟಿದ್ದಾರೆ, ನಿವೇಶನ ಮತ್ತು equipmentಗಾಗಿ ಹಣ ಕೊಟ್ಟಿದ್ದಾರೆ. ಜಾಗ್ರತೆ ಕಟ್ಟಡವನ್ನು ಮಾಡುತ್ತೀರಾ ?

†ಶ್ರೀ ಎಸ್. ಆರ್. ಕಂಠಿ.—ಅಲ್ಲಿಗೆ ಹೈಸ್ಕೂಲನ್ನು ಕೊಡುವ ಕಾಲಕ್ಕೆ ಮೂವತ್ತು ಸಾವಿರ ರೂಪಾಯಿ ಕಟ್ಟಡಕ್ಕಾಗಿ ಕೊಡಬೇಕು, equipment, ಎಂದರೆ ಸಲಕರಣೆಗಳಿಗಾಗಿ ಮೂರು ಸಾವಿರ ರೂಪಾಯಿ ಕೊಡಬೇಕು ಮತ್ತು ಆಟದ ಮೈದಾನಕ್ಕೆ ಜಾಗ ಕೊಡಬೇಕೆಂದು ಕೇಳಲಾಗಿತ್ತು. ಅವರು ಒಪ್ಪಿದರು. ಈಗ ಅವರು ಇಪ್ಪತ್ತು ಸಾವಿರ ರೂಪಾಯಿ ಮಾತ್ರ ಕಟ್ಟಡಕ್ಕಾಗಿ ಕೊಟ್ಟಿದ್ದಾರೆ. ಇನ್ನೂ ಹತ್ತು ಸಾವಿರ ರೂಪಾಯಿ ಅವರು ಕೊಡುವುದಿದೆ. ಮೂರು ಸಾವಿರ ಎಕ್ವಿಪ್‌ಮೆಂಟಿಗೆ ಕೊಟ್ಟಿದ್ದಾರೆ. ಜಾಗಕ್ಕೆ 4,834-13 ರೂಪಾಯಿ ಕೊಡಬೇಕಾದುದರಲ್ಲಿ ಎರಡು ಸಾವಿರ ಮಾತ್ರ ಕೊಟ್ಟಿದ್ದಾರೆ ; ಇನ್ನೂ ಪೂರ್ತಿ ಬಂದಿಲ್ಲ.

ಶ್ರೀ ಟಿ. ಮಾದಯ್ಯ ಗೌಡ.—ಈಗ ಜಾಗಕ್ಕೆ ಇನ್ನೂ 2,400 ರೂಪಾಯಿ ತಮಗೆ ಕೊಡಲು ಸಿದ್ಧವಾಗಿದ್ದಾರೆ.

ಶ್ರೀ ಎಸ್. ಆರ್. ಕಂಠಿ.—ಜಾಗ 1,834 ರೂಪಾಯಿ ಚಿಲ್ಲರೆಗೆ ಖರೀದಿಯಾಗಿದೆ, ಅವರು ಎರಡು ಸಾವಿರ ರೂಪಾಯಿ ಮಾತ್ರ ಕೊಟ್ಟಿದ್ದಾರೆ. ಆದುದರಿಂದ ಅಕ್ಯೆಜಿಷನ್ ಪೂರ್ತಿಯಾಗಿಲ್ಲ

ಶ್ರೀ ಎಂ. ಸಿ. ಬನಪ್ಪ.—ಜನರು 20 ಸಾವಿರ ರೂಪಾಯಿ ಕೊಟ್ಟಿದ್ದರೆ, ಮಿಕ್ಕುದನ್ನು ಸರ್ಕಾರ ಹಾಕಿ ಕಟ್ಟಿಸಬಹುದಲ್ಲವೆ ?

ಶ್ರೀ ಎಸ್. ಆರ್. ಕಂಠಿ.—30 ಸಾವಿರ ಅವರು ಕೊಡಬೇಕೆಂಬ ನಿಯಮವಿದೆ.

ಶ್ರೀ ಎಂ. ಸಿ. ಬನಪ್ಪ.—ಕಟ್ಟಡ ಮತ್ತು ಸೈಟಿಗೆ ಅರ್ಧ ಖರ್ಚನ್ನು ಖಾಸಗಿಯವರು ಕೊಡುವುದಾದರೆ ಗ್ರಾಂಟ್ ಇನ್ ಏಡ್ ಕೋಡ್ ಪ್ರಕಾರ ಮಿಕ್ಕುದನ್ನು ಸರ್ಕಾರ ಕೊಡಬೇಕಲ್ಲವೆ ?

ಶ್ರೀ ಎಸ್. ಆರ್. ಕಂಠಿ.—ಅದು ಈಗ ಜಾರಿಗೆ ಬಂದಿದೆ. ಆದರೆ ಈ ಹೈಸ್ಕೂಲು ಕೊಡುವಾಗ ಅವರು ಮೂವತ್ತು ಸಾವಿರ ರೂಪಾಯಿ ಕೊಡಬೇಕೆಂದು ಕರಾರಾಗಿದೆ.

ಶ್ರೀ ಅಣ್ಣಾರಾವ್ ಗಣಮುಖಿ.—ಈ ಹೈಸ್ಕೂಲು ಅಲ್ಲಿನ ಪ್ರೈಮರಿ ಸ್ಕೂಲಿನಲ್ಲಿ ನಡೆದರೆ ಆ ಪ್ರೈಮರಿ ಸ್ಕೂಲು ಯಾವ ಸ್ಥಳದಲ್ಲಿ ನಡೆಯುತ್ತದೆ ?

†Indicates that the remarks or speeches have not been revised by the member concerned.

ಶ್ರೀ ಎಸ್. ಆರ್. ಕಂಠಿ.—ಬೇರೆ ಸ್ಥಳದಲ್ಲಿ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಎಷ್ಟು ದಿವಸಗಳಿಂದ ಅದು ಪ್ರೈಮರಿ ಸ್ಕೂಲಿನಲ್ಲಿ ನಡೆಯುತ್ತಿದೆ?

ಶ್ರೀ ಎಸ್. ಆರ್. ಕಂಠಿ.—1956ನೇ ಜೂನ್ ನಿಂದ ಹೈಸ್ಕೂಲು ಪ್ರಾರಂಭವಾಗಿದೆ, ಆಗಿನಿಂದ.

Sri G. VENKATAI GOWDA.—May I know who is managing the High School? Is it a Government School?

ಶ್ರೀ ಎಸ್. ಆರ್. ಕಂಠಿ.—ಇದು ಸರ್ಕಾರಿ ಶಾಲೆ.

Sri G. VENKATAI GOWDA.—If it is a Government School, is it not the duty of the Government to provide accommodation for it? You were pleased to say that a sum of Rs 30,000 has to be deposited by the people; unless that amount is deposited what prompted the Government to sanction the High School there?

ಶ್ರೀ ಎಸ್. ಆರ್. ಕಂಠಿ.—ಸರ್ಕಾರ ಆ ಶಾಲೆಯನ್ನು ಕೊಡುವುದಕ್ಕೆ ಮುಂಚೆ ಒಂದು ಷರತ್ತು ಹಾಕಿದ್ದಾರೆ. ಮೂವತ್ತು ಸಾವಿರ ರೂಪಾಯಿ ಕಟ್ಟಡಕ್ಕೆ, ಒಂದು ನಿವೇಶನ, ಮತ್ತು ಸಲಕರಣೆಗಳಿಗೆ ಮೂರು ಸಾವಿರ ರೂಪಾಯಿ ಇಷ್ಟನ್ನು ಅಲ್ಲಿನವರು ಕೊಡಬೇಕೆಂದು ಮಾಡಿದ್ದಾರೆ.

ಶ್ರೀ ಇ. ನಾರಾಯಣ ಗೌಡ.—ಮೂವತ್ತು ಸಾವಿರ ರೂಪಾಯಿನಲ್ಲಿ ಸೈಟಿನ ಬೆಲೆಯೂ ಸೇರುತ್ತದೆಯೇ?

ಶ್ರೀ ಎಸ್. ಆರ್. ಕಂಠಿ.—ಮೂವತ್ತು ಸಾವಿರ ಮಲ್ಲದೆ ಸೈಟಿಗಾಗಿ ಬೇರೆ ಹಣ ಕೊಡಬೇಕೆಂದಿದೆ

ಶ್ರೀ ಅಣ್ಣಾರಾವ್ ಗಣಮುಖಿ.—ಜನ 20 ಸಾವಿರ ಕೊಟ್ಟಿದ್ದಾರೆ; ಇನ್ನಿಪ್ಪತ್ತು ಸಾವಿರ ರೂಪಾಯಿ ಸರ್ಕಾರ ಹಾಕಿ ಕಟ್ಟಡ ಕಟ್ಟಿಸಿ ಮುಂದೆ ಅವರಿಂದೇಕೆ ವಸೂಲು ಮಾಡಬಾರದು?

ಶ್ರೀ ಎಸ್. ಆರ್. ಕಂಠಿ.—ತಾವು ಹೇಳುವುದು ಸೂಚನೆ. ಅವರು 10 ಸಾವಿರ ಕೊಟ್ಟು 31-3-1962ರ ವರೆಗೆ ಕಾಲಾವಕಾಶ ತೆಗೆದುಕೊಂಡಿದ್ದರು, ಕೊಟ್ಟಿಲ್ಲ. ಈಗೇನು ಮಾಡುವುದೆಂದು ಇನ್ನೂ ಗೊತ್ತಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಆ ಇಪ್ಪತ್ತು ಸಾವಿರ ರೂಪಾಯಿ ಹಾಕಿ ಸರ್ಕಾರ ಕಟ್ಟಡವನ್ನು ಪ್ರಾರಂಭ ಮಾಡಿ ಇನ್ನು ಹತ್ತು ಸಾವಿರ ರೂಪಾಯಿಗಳನ್ನು ಆ ಮೇಲೆ ಜನರಿಂದ ತೆಗೆದುಕೊಳ್ಳುವುದರಲ್ಲೇನು ತೊಂದರೆ?

ಶ್ರೀ ಎಸ್. ಆರ್. ಕಂಠಿ.—ಅವರು ಹೇಳಿದ ಸೂಚನೆಯನ್ನೇ ನೀವೂ ಕೇಳುತ್ತಿದ್ದೀರಿ. ಅದನ್ನು ಯೋಚನೆ ಮಾಡಬೇಕು.

ಶ್ರೀ ಜಿ. ದುಗ್ಗಪ್ಪ.—ಪ್ಲಾನ್ ಮತ್ತು ಎಸ್ಟಿಮೇಟ್ ಮಾಡಿಸಿದ್ದೀರಾ?

ಶ್ರೀ ಎಸ್. ಆರ್ ಕಂಠಿ.—ಇನ್ನೂ ಇಲ್ಲ.

ಶ್ರೀ ಜಿ. ದುಗ್ಗಪ್ಪ.—ಈಗಲಾದರೂ ಪ್ಲಾನ್ ಮತ್ತು ಎಸ್ಟಿಮೇಟ್ ಮಾಡಿಸಿ, ಯಾರಿಂದ ಹಣ ಬರ ಬೇಕೋ ಅವರಿಗೆ ತಗಾದೆ ಮಾಡುತ್ತೀರಾ?

ಶ್ರೀ ಎಸ್. ಆರ್. ಕಂಠಿ.—ತಗಾದೆ ಮಾಡಿದ್ದೇವೆ; ಕಟ್ಟಡಕ್ಕೆ ಕನಿಷ್ಠ ಪಕ್ಷ 60 ಸಾವಿರ ರೂಪಾಯಿ ಬೇಕಾಗುತ್ತದೆಂಬುದು ತಮಗೆ ಗೊತ್ತಿದೆ.

ಶ್ರೀ ಎಸ್. ಶಿವಪ್ಪ.—ಆ ಗ್ರಾಮದವರು 30 ಸಾವಿರ ರೂಪಾಯಿ ಕಟ್ಟಬೇಕೆಂದು ಕರಾರಾಗಿದೆ ಎಂದು ಹೇಳಿದಿರಿ, ಹೀಗೆ ಕಟ್ಟಬೇಕಾಗಿರುವ ಎಷ್ಟು ಕಡೆ ಕಟ್ಟಡಗಳನ್ನು ಕಟ್ಟಿಸಿದ್ದೀರಿ?

ಶ್ರೀ ಎಸ್. ಆರ್. ಕಂಠಿ.—ಆ ಮಾಹಿತಿ ಈಗ ನನ್ನಲ್ಲಿಲ್ಲ.

Mr. SPEAKER.—Question No. 106.

Sri K. PUTTASWAMY.—Sir, this question may be held over.

Mr. SPEAKER.—Yes.

Construction of an Anecut on the Janegundi Halla near Saidakalli Village in Bhadravathi Taluk.

*Q.—150. Sri T. D. DEVENDRAPPA (Bhadravathi).—

Will the Government be pleased to state:—

(*a*) whether any survey has been conducted to construct an anecut on the Janegundi Halla near Saidakalli Village in Holehonnur Hobli, Bhadravathi Taluk;

(*b*) whether they have received any representation from the people of this area, stating that thousands of dry lands can be irrigateds under this anecut;

(*c*) the estimated cost of the above said anecut;

(*d*) when they will take up this work?

A.—Sri ALUR HANUMANTHAPPA (Deputy Minister for Minor Irrigation).—

(*a*) Surveys have been conducted for the construction of a Tank.

(*b*) Yes.

(*c*) The estimated cost of the Tank is Rs. 2.23 lakhs.

(*d*) When funds can be made available for this work. The work has not been included in the current year's budget.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಹೊಳೆ ಹೊನ್ನೂರು ಹೋಬಳಿ ಸಾಯಕದಕಳ್ಳಿ ಗ್ರಾಮದ ಹತ್ತಿರ ಜಾನೆಗುಂಡಿ ಹಳ್ಳಕ್ಕೆ ಒಂದು ಅಣೆಕಟ್ಟಿದರೆ ಅದರಿಂದ ಎಷ್ಟು ಜಮೀನು ನೀರಾವರಿಯಾಗುತ್ತದೆ?

ಶ್ರೀ ಆಲೂರು ಹನುಮಂತಪ್ಪ.—ಅಣೆ ಕಟ್ಟುವುದು ಸಾಧ್ಯವಲ್ಲ ವೆಂದು ಅಲ್ಲಿ ಕೆರೆ ಕಟ್ಟುವುದಕ್ಕೆ ಅಂದಾಜು ತಯಾರಾಗಿದೆ. ಆ ಕೆರೆಯಿಂದ 220 ಎಕರೆ ನಾಗು ವಳಿಯಾಗುತ್ತದೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಆಯವ್ಯಯದ ಮುಂಗಡ ಪತ್ರದಲ್ಲಿ ಇದನ್ನು ಏಕೆ ಸೇರಿಸಿಲ್ಲ?

ಶ್ರೀ ಆಲೂರು ಹನುಮಂತಪ್ಪ.—ಚಾಲ್ತಿ ಸಾಲಿನಲ್ಲಿ ಸೇರಿಸದಿರುವುದಕ್ಕೆ ಹಣಕಾಸಿನ ಮಗ್ಗಟ್ಟು